Sri R. MUNISWAMIAH.—Thank you, Sir.

Sri H. C. LINGA REDDY.—What are the several small handicrafts that the societies are engaged in, Sir?

Dr. R. NAGAN GOWDA.—There are a number of small industrial co-operatives dealing in vegetables, fruit culture, poultry farming, dairy farming, and then weaving, carpentry, smithy, leather works, etc.

Sri H. C. LINGA REDDY.—Are the Government satisfied that these several co-operative societies are working satisfactorily?

Sri H. SIDDAVEERAPPA.—So far as that position is concerned, under the rural industrialisation scheme, we have got nearly 400 co-operative societies. We have collected quite a large amount of money, coming to Rs. 6 to 7 lakhs. As I have said, the societies are working fairly satisfactorily.

Sri H. C. LINGA REDDY.—Are the Government aware that the people of Kolar are urging that fruit canning industry should be started on a co-operative basis?

Sri H. SIDDAVEERAPPA.—I have already answered that question when it came up here once, so far as fruit canning is concerned.

Sri H. C. LINGA REDDY.—Will the Government consider the desirability of starting a co-operative society for fruit canning?

Sri H. SIDDAVEERAPPA.—I cannot say. We have got a scheme for having a fruit canning industry for the whole State, located in one place.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಈ 534 ಸಹಕಾರ ಪದ್ಧತಿ ಕೈಗಾರಿಕೆ ಸಂಸ್ಥೆಗಳಲ್ಲಿ ರೂರಲ್ ಇಂಡಸ್ಟ್ರಿಯಲ್ ಕೈಗಾರಿಕೆ ಸಂಸ್ಥೆಗಳೂ ಸೇರಿರುತ್ತವೆಯೇ?

Dr. R. NAGAN GOWDA.—4 ಮಾತ್ರ ಸೇರಿವೆ. ಮಿಕ್ಕವು cotton handloom weavers; silk handloom weavers, woollen handloom weavers.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಲಾಭವನ್ನು ಗೊತ್ತುಮಾಡುವಾಗ ಈ 3,68,238 ರೂಪಾಯಿಗಳಲ್ಲಿ ಸರ್ಕಾರದವರು ಕೊಟ್ಟಿರುವ ಸಬ್‌ಸ್ಟೆಕ್ಷಿ ಹೊರಲಿಗನ್ನು ಬಿಟ್ಟುತಾನೆ ತಾವು ಲಾಭ ಗೊತ್ತುಮಾಡುವುದು?

ಡಾ॥ ಆರ್. ನಾಗನಗೌಡ.—ಹೌದು.

Sri V. M. MASCARENHAS.—A new charka centre has been opened in Bangalore recently. Would it be possible for us to get a loan if a new co-operative society is formed for the purpose?

Dr. R. NAGAN GOWDA.—That is just the proper thing to do. In all these khadi industries or charka sanghas, it is best they should organise themselves as a co-operative society and do business on a business like basis. I am sure they will succeed.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಕೈಗಾರಿಕೆ ಸಂಸ್ಥೆಗಳಲ್ಲಿ ತಯಾರಾಗತಕ್ಕಂಥ ವಸ್ತುಗಳನ್ನು ಅಲ್ಲಲ್ಲೇ ಮಾರಾಟ ಮಾಡಲು ತಾವೇನಾದರೂ ಸೂಕ್ತ ಏರ್ಪಾಡುಗಳನ್ನು ಮಾಡಿದ್ದೀರಾ?

ಡಾ॥ ಆರ್. ನಾಗನಗೌಡ.—ಈಗ ಸಧ್ಯಕ್ಕೇನೋ ಅವು ಅಲ್ಲಲ್ಲೇ ಮಾರಾಟವಾಗುತ್ತಿವೆ. ಆದರೆ ಇನ್ನು ಮುಂದೆ ಅವುಗಳಿಗೆ ಒಂದು ಎಂಪೋರಿಯಂ ಕೂಡ ತೆರೆಯಬೇಕೆಂಬ ಆಲೋಚನೆಯನ್ನು ಸರ್ಕಾರದವರು ಮಾಡುತ್ತಿದ್ದಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈಗ ಆ ಗ್ರಾಮಾಂತರ ಪ್ರದೇಶಗಳಿಗೆಲ್ಲಾ ಮಿಲ್‌ಮೇಡ್ ಸಾಮಾನುಗಳು ಬಂದಿರುವುದರಿಂದ ಆ ಗ್ರಾಮ ಕೈಗಾರಿಕೆ ಸಂಸ್ಥೆಗಳ ಸಾಮಾನಿನಮೇಲೆ ಹೈಪೋಟ ಆಗುವುದಕ್ಕೆ ಅವಕಾಶ ಉಂಟಾಗಿದೆ. ಅದನ್ನು ತಡೆಗಟ್ಟುವುದಕ್ಕೇನಾದರೂ ಏರ್ಪಾಡು ಮಾಡಿದ್ದೀರಾ?

ಡಾ॥ ಆರ್. ನಾಗನಗೌಡ.—ಹಾಗೆ ನಾವು ಹೈಪೋಟಗಳಿಗೆ ಹಿಂಜೆಗ್ಗುವುದಕ್ಕಾಗುವುದಿಲ್ಲ. ನಾವು ನಮ್ಮ ಕಾಲಮೇಲೆ ನಿಂತು, ಧೈರ್ಯದಿಂದಲೂ ಮತ್ತು ಎಚ್ಚರಿಕೆಯಿಂದಲೂ ಕೆಲಸ ನಡೆಸಬೇಕಾಗಿದೆ. ಹಾಗೆ ನಾವು ಅವುಗಳಿಗೆ ಅಡ್ಡಿಪಡಿಸುವುದಕ್ಕೂ ಆಗುವುದಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಕೈಯಲ್ಲಿ ಮಾಡತಕ್ಕಂಥ ವಸ್ತುಗಳು, ಮಿಷ್ ಮೂಲಕ ತಯಾರಾಗುವ ಸಾಮಾನುಗಳಮೇಲೆ ಹೈಪೋಟಗೆ ನಿಲ್ಲಲು ಹೇಗೆ ಸಾಧ್ಯವಾಗುತ್ತದೆ?

ಡಾ॥ ಆರ್. ನಾಗನಗೌಡ.—ಗ್ರಾಮಾಂತರ ಕೈಗಾರಿಕೆ ವಸ್ತುಗಳೂ ಕೂಡ ಮಿಲ್‌ಮೇಡ್ ವಸ್ತುಗಳ ಬಗ್ಗೆ ಹೈಪೋಟ ನಡೆಸುವುದಕ್ಕೆ ಸಾಧ್ಯವಿದೆ. The entire Japanese cottage industry stands on that basis. They are using ony small machinery and I think we should develop it on that basis. Otherwise, we will be just groping in darkness all the while.

Pandavapura Co-operative Sugar Factory.

Q.—665. **Sri S. GOPALA GOWDA** (Sagar—Hosanagar).—

Will the Government be pleased to state :—

(*a*) whether a General Body meeting of the Pandavapura Co-operative Sugar Factory, Ltd., was held on

(SRI S. GOPALA GOWDA.)

27th January 1955 in Kokila Talkies, Pandavapura under the Chairmanship of the Deputy Commissioner, Mandya ;

(*b*) the number of members of the said Co-operative Sugar Factory present on that day ;

(*c*) the promoters of the said factory ;

(*d*) whether it has come to their notice that the Pandavapura Multi-purpose Co-operative Society is carrying on correspondence with the Central Government for obtaining licence to the Sugar Factory proposed to be established in Pandavapura even before the above company was registered ;

(*e*) the number of new Sugar Factories that may be given licences in the Mandya District ?

A.—Dr. R. NAGAN GOWDA (Minister for Agriculture).—

(*a*) Yes.

(*b*) About 500 including most of the promoters.

(*c*) Sriyuths—

1. K. V. Shankara Gowda
2. S. M. Lingappa
3. M. K. Shivananjappa
4. P. N. Jawarappa Gowda
5. G. S. Bomme Gowda
6. K. S. Nanjunde Gowda
7. K. M. Puttaswamy Gowda
8. K. V. Yalakki Gowda
9. B. Bore Gowda
10. K. Veere Gowda
11. K. Laxme Gowda
12. K. Thammiah
13. Patel T. Subbe Gowda
14. K. Sreekante Gowda
15. B. Y. Neele Gowda

(*d*) Yes.

(*e*) The Government of India issue the licences.

ಶ್ರೀ ಎಸ್. ಗೋಪಾಲಗೌಡ.—(ಬ) ಪ್ರಶ್ನೆಗೆ ಉತ್ತರವಾಗಿ 500 ಜನಗಳಿದ್ದರೆಂದು ಹೇಳಿದ್ದೀರಿ. ಆ ಪೈಕಿ ಷೇರ್‌ಹೋಲ್ಡರ್‌ಗಳು ಎಷ್ಟು ಜನರಿದ್ದರು?

ಡಾ॥ ಆರ್. ನಾಗನಗೌಡ.—ಆಗ ತಾನೆ ಅದನ್ನೆನ್ನೂ ಆರ್ಗನೈಜ್ ಮಾಡುವುದರಲ್ಲಿತ್ತು. ಆದುದರಿಂದ ಆಗ ಅಷ್ಟೇನೂ ಹೆಚ್ಚು ಮಂದಿ ಷೇರ್ ಹೋಲ್ಡರುಗಳಿದ್ದಂತೆ ಕಂಡುಬರುವುದಿಲ್ಲ. ಆ ದಿವಸ ಅಲ್ಲಿದ್ದವರೆಲ್ಲ ಇದರ ಪ್ರಮೋಟರ್ಸ್; ಈ ಸೊಸೈಟಿ ಸ್ಥಾಪನೆಯಾಗಬೇಕೆಂಬ ಆಸೆ ಅವರೆಲ್ಲರಿಗೂ ಇತ್ತು. ಆ ಪೈಕಿ ಅನೇಕರು ಈಗ ಮೆಂಬರ್ಸ್ ಆಗಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ನಾನು ಕೇಳುತ್ತಿರುವುದು ಆ ದಿವಸ ಅಲ್ಲಿ ಬರಿ ಷೇರ್‌ಹೋಲ್ಡರುಗಳೇ ಸೇರಿ ಆ ಸಭೆಯನ್ನು ನಡೆಸಿದರೇ ಎಂದು ?

ಡಾ॥ ಆರ್. ನಾಗನಗೌಡ.—ನಾನಾಗಲೇ ಹೇಳಿದ ಹಾಗೆ, ಅಲ್ಲಿ ಸೇರಿದ್ದವರ ಪೈಕಿ ಅನೇಕರು ಈ ಸಂಘವನ್ನು ಆರ್ಗನೈಸ್ ಮಾಡುವುದಕ್ಕಾಗಿ ಸೇರಿದ್ದವರು. ಆ ಪೈಕಿ ಅನೇಕರು ಪ್ರಮೋಟರ್ಸ್ ಮತ್ತು ಆರ್ಗನೈಜರುಗಳಾಗಿದ್ದರು.

ಶ್ರೀ ಎಸ್. ಗೋಪಾಲಗೌಡ.—ಅಲ್ಲಿಗೆ ಆ ಸಭೆಯೇನಿದ್ದರೂ ಆ ಪ್ರಮೋಟರ್ಸ್ ಮತ್ತು ಆರ್ಗನೈಜರ್‌ಗಳ ಸಭೆ ಆಯಿತು ತಾನೇ! ಅದನ್ನು ತಾವು ಕೋಆಪರೇಟೀವ್ ರೂಲ್ಸು ಪ್ರಕಾರ ಷೇರ್ ಹೋಲ್ಡರ್‌ಗಳ ಸಭೆಯೆಂದು ಎಲ್ಲಾದರೂ ಕರೆದಿರುವುದನ್ನು ನೋಡಿದ್ದೀರಾ ? ಅಥವಾ ಕೇಳಿದ್ದೀರಾ ?

ಡಾ॥ ಆರ್. ನಾಗನಗೌಡ.—ಆಗ ತಾನೆ ಅದು ಮೊದಲನೆಯ ಮೀಟಿಂಗಾಗಿತ್ತು. ಅಷ್ಟೇನೂ ಹೆಚ್ಚಿಗೆ ಜನ ಮೆಂಬರುಗಳು ಆಗ ಇರಲಿಲ್ಲ. ಈಗ ಅದು ರಿಜಿಸ್ಟರಾದಮೇಲೆ ಬಹಳ ಜನ ಮೆಂಬರುಗಳಾಗಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ನನ್ನ ಪ್ರಶ್ನೆ ಬಹಳ ಸುಲಭವಾದದ್ದು. ಆ ದಿವಸ ಆ ಸಭೆಯಲ್ಲಿದ್ದ ಷೇರ್ ಹೋಲ್ಡರುಗಳ ಸಂಖ್ಯೆ ಎಷ್ಟು ?

ಡಾ॥ ಆರ್. ನಾಗನಗೌಡ.—ಆ ದಿವಸ ಅಲ್ಲಿದ್ದವರೆಲ್ಲೆಲ್ಲ ಆರ್ಗನೈಜರುಗಳೇ ಜಾಸ್ತಿ ಇದ್ದದ್ದು.

ಶ್ರೀ ಎಸ್. ಗೋಪಾಲಗೌಡ.—ಅಲ್ಲಿಗೆ ಇದು ಆರ್ಗನೈಜರ್ಸ್‌ಗಳ ಮೀಟಿಂಗ್ ಆಗಲಿಲ್ಲವೇ?

ಡಾ॥ ಆರ್. ನಾಗನಗೌಡ.—ಹೌದು.

ಶ್ರೀ ಎಸ್. ಗೋಪಾಲಗೌಡ.—ಈಗ ತಾವು ಮೈಸೂರು ಸಂಸ್ಥಾನದಲ್ಲಿ ಎಷ್ಟು ಸಕ್ಕರೆ ಕಂಪೆನಿಗಳನ್ನು ತೆರೆಯಬೇಕೆಂದು ಆಲೋಚನೆ ಮಾಡಿದ್ದೀರಿ ?

ಡಾ॥ ಆರ್. ನಾಗನಗೌಡ.—ನಾಲ್ಕು; ಎರಡು ಕೋ-ಆಪರೇಟಿವ್ ಬೇಸಿಸ್ ಮೇಲೆ. ಇನ್ನೆರಡು ಪ್ರೈವೇಟ್ ಕಂಪೆನಿಗಳು.

ಶ್ರೀ ಎಸ್. ಗೋಪಾಲಗೌಡ.—ಎಲ್ಲೆಲ್ಲ?

ಶ್ರೀ ಎಚ್. ಸಿದ್ದವೀರಪ್ಪ.—ಪಾಂಡವಪುರ, ಕಂಪ್ಲೀ ಗೋರಿಬಿದನೂರು ಮತ್ತು ಶಿವಮೊಗ್ಗ. ಇವುಗಳಲ್ಲದೆ ಇನ್ನೂ ಒಂದರ ವಿಚಾರ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಶ್ರೀ ಎಸ್. ಗೋಪಾಲಗೌಡ.—ಈ ನಾಲ್ಕು ಅಲ್ಲದೆ ಮತ್ತೊಂದಕ್ಕೆ ಬೇರೆ ಅವಕಾಶ ಕೊಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಅದಿನ್ನೂ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಶ್ರೀ ಎಸ್. ಗೋಪಾಲಗೌಡ.—ಪಾಂಡವಪುರದ ವಿವಿಧೋದ್ದೇಶ ಸಹಕಾರ ಸಂಘದವರು ಒಂದು ಸಕ್ಕರೆ ಕಂಪೆನಿಯನ್ನು ತೆರೆಯಲು ಕೇಂದ್ರ ಸರ್ಕಾರದಿಂದ ಲೈಸೆನ್ಸ್ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಬಂದಿದೆ.

ಶ್ರೀ ಎಸ್. ಗೋಪಾಲಗೌಡ.—ಒಂದೇ ಸ್ಥಳದಲ್ಲಿ ಎರಡು ಕಂಪೆನಿಗಳನ್ನು ಸ್ಥಾಪಿಸುವುದಕ್ಕೆ ಆಗುತ್ತದೆಯೇ ?

ಡಾ॥ ಆರ್. ನಾಗನಗೌಡ.—ಅಲ್ಲಿ ಮೊದಲು ಒಂದೇ ಕಂಪೆನಿಗೆ ಅವಕಾಶವಿದ್ದದ್ದು. ಆದರೆ ಮುಲ್ ಪರ್ಪಸಸ್ ಶುಗರ್ ಕಂಪೆನಿ ಸೊಸೈಟಿಯದ್ದಾಗ ಅದರ ಸರಹದ್ದು ಬಹಳ ಕಡಮೆಯಾಗಿದ್ದಿತು. ಅದಕ್ಕಾಗಿ ಈಗ ಮತ್ತೊಂದು ಕಂಪೆನಿಯನ್ನು ಅಲ್ಲಿ ಪ್ರಾರಂಭಿಸಲಾಗಿದೆ. ಈಗ ಆ ಎರಡು ಕಂಪೆನಿಗಳೂ ಹೊಂದಾಣಿಕೆಯಿಂದ ಕೆಲಸಮಾಡಿಕೊಂಡು ಹೋಗುತ್ತಿವೆ,

ಶ್ರೀ ಎಸ್. ಗೋಪಾಲಗೌಡ.—ಈ ಪಾಂಡವಪುರದ ಎವಿಥೋದ್ದೇಶ ಸಂಘದ ಸಕ್ಕರೆ ಕಂಪೆನಿಯ ಪರವಾಗಿ ಶ್ರೀ ಬಿ. ವೈ. ನೀಲೇಗೌಡರು ಕೇಂದ್ರ ಸರ್ಕಾರ ದೊಡನೆ ಪತ್ರವ್ಯವಹಾರ ನಡೆಸುತ್ತಿದ್ದುದು ನಿಜವೇ?

ಡಾ॥ ಆರ್. ನಾಗನಗೌಡ.—ಹೌದು, ನಿಜ.

ಶ್ರೀ ಎಸ್. ಗೋಪಾಲಗೌಡ.—ಹಾಗೆ ಅವರು ಮೊದಲು ಈ ಸಹಕಾರ ಸಂಘದ ಸಕ್ಕರೆ ಕಂಪೆನಿಗೆ ಪ್ರಯತ್ನ ನಡೆಸುತ್ತಿದ್ದವರು ಹೀಗೆ ಪ್ರೈವೇಟಾಗಿ ಒಂದು ಸಕ್ಕರೆ ಕಂಪೆನಿಗೆ ಪ್ರಯತ್ನಪಟ್ಟಿದ್ದರ ಉದ್ದೇಶವೇನು?

ಡಾ॥ ಆರ್. ನಾಗನಗೌಡ.—ಆ ಮಲ್ಟಿಪರ್ಪಸ್ ಸೊಸೈಟಿಯ ಸಕ್ಕರೆ ಕಾರ್ಖಾನೆಗೆ ಸೇರಿದ್ದ ಪ್ರದೇಶ area of operation ಬಹಳ ಕಡಮೆಯಾಗಿತ್ತು. ಆದುದರಿಂದ ಈಗ ಮತ್ತೊಂದು ಕಂಪೆನಿಯನ್ನು ತೆರೆಯಲು ಪ್ರಯತ್ನಮಾಡಿರುತ್ತಾರೆ. ಈಗ ಈ ಹೊಸದಾಗಿ ತೆರೆಯುವುದಕ್ಕೆ ನಾಲ್ಕು ತಾಲ್ಲೂಕುಗಳು ಸೇರಿರುತ್ತವೆ. ಮೊದಲು ಆ ಮಲ್ಟಿಪರ್ಪಸ್ ಸೊಸೈಟಿಯವರು ತಮ್ಮ ಕಂಪೆನಿಯನ್ನು ಸ್ಥಾಪಿಸಲು ಕಾಲ ವಿಳಂಬಮಾಡಿದರು. ಆ ಕಾಲದಲ್ಲಿ ಇವರು ಈ ಹೊಸ ಕಂಪೆನಿಯನ್ನು ತೆರೆಯಬೇಕೆಂಬ ಬಗ್ಗೆ ಅಪ್ಲಿಕೇಷನ್ ಹಾಕಿಕೊಂಡರು. ಆಗ ಇವೆರಡಕ್ಕೂ ಸಾಕಾದಷ್ಟು area of operationಗೆ ಅವಕಾಶವಿದ್ದುದರಿಂದ ಅಲ್ಲಿ ಎರಡು ಕಂಪೆನಿಗಳನ್ನು ಪ್ರಾರಂಭಿಸುವುದಕ್ಕೆ ಅವಕಾಶ ಉಂಟಾಯಿತು. ಈ ಎರಡು ಕಂಪೆನಿಗಳೂ ಈಗ ಹೊಂದಾವಣೆಯಿಂದ ಕೆಲಸಮಾಡಿಕೊಂಡು ಹೋಗುತ್ತಿವೆ. ರಿಜಿಸ್ಟ್ರಾರ್ ಅವರು ಚುರುಕಾಗಿ ಕೆಲಸಮಾಡುತ್ತಿದ್ದಾರೆ. ಕೆಲಸಕಾರ್ಯಗಳು ಬೇಗ ಮುಂದುವರಿಯುತ್ತಿವೆ.

12-30 P.M.

ಶ್ರೀ ಎಸ್. ಗೋಪಾಲಗೌಡ.—ಅಂದರೆ ಈಗ ಪ್ರಮೋಟ್ ಮಾಡಿರತಕ್ಕ ಕಂಪೆನಿಯನ್ನು ರದ್ದುಪಡಿಸುತ್ತೀರಾ?

ಡಾ॥ ಆರ್. ನಾಗನಗೌಡ.—ಮಲ್ಟಿಪರ್ಪಸ್ ಕೋ-ಆಪರೇಟೀವ್ ಸೊಸೈಟಿಯ area of operation ಬಹಳ ಕಡಮೆ. ಈಗ ಮಾಡಬೇಕೆಂದಿರುವ ಸಕ್ಕರೆ ಕಂಪೆನಿಗೆ ನಾಲ್ಕು ತಾಲ್ಲೂಕುಗಳವರೂ ಕೂಡಿದ್ದಾರೆ. ಹೀಗೆ ಕೂಡಿದರೆ ಸರಿಯಾಗಿ ಆಗುತ್ತದೆ. ಈ ಮಾರ್ಗದಲ್ಲಿ ಕೆಲಸಮಾಡುತ್ತಿದ್ದಾರೆ. ಹೀಗೆ ಅನ್ಯೋನ್ಯವಾಗಿ ಸೇರಿದರೆ ಕೆಲಸ ಸರಿಯಾಗಿ ಆಗುತ್ತದೆಂದು ನನ್ನ ಭಾವನೆ.

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ ಪಾಂಡವಪುರ ಕೋ-ಆಪರೇಟಿವ್ ಸೊಸೈಟಿಯವರು ಸೇರಿ ಆ ಕಂಪೆನಿಯನ್ನು ಸ್ಥಾಪನೆ ಮಾಡಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ಅವರೂ ಕೆಲವು ಡೈರೆಕ್ಟರುಗಳನ್ನು consult ಮಾಡಿಯೇ ಮಾಡಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಆ ಡೈರೆಕ್ಟರುಗಳು ಈ ಪ್ರಮೋಟರ್ಸ್‌ನಲ್ಲಿದ್ದಾರೆಯೇ?

ಡಾ॥ ಆರ್. ನಾಗನಗೌಡ.—ಕೆಲವರು ಇದ್ದಾರೆಂದು ಕಾಣುತ್ತದೆ. I would like to have notice of that.

ಶ್ರೀ ಎಸ್. ಗೋಪಾಲಗೌಡ.—ಈಗ ಹೊಸದಾಗಿ ಪ್ರಮೋಟ್ ಮಾಡುವವರಿಗೂ ಈಗ ಇರುವ ಸಹಕಾರ ಸಂಘಕ್ಕೂ ಭಿನ್ನಾಭಿಪ್ರಾಯ ಬಂದಿದೆ ಎಂಬುದು ಗೊತ್ತಿದೆಯೆ?

ಡಾ॥ ಆರ್. ನಾಗನಗೌಡ.—ಅಷ್ಟೇನೂ ತೀವ್ರ ಭಿನ್ನಾಭಿಪ್ರಾಯ ಬಂದಿಲ್ಲ.

Mr. SPEAKER.—You can take up this question on another occasion. We have spent half an hour and only six questions have been disposed of.

Dr. R. NAGAN GOWDA.—It could be taken up either under Co-operation or Industries Demand.

Cocoanut Cultivation in Arsikere and Tiptur.

Q.654.—Sri K. PANCHAKSHARIAH (Arsikere).—

Will the Government be pleased to state :—

(*a*) the extent of cocoanut garden land feeding the Regulated Markets of Arsikere and Tiptur; the acres of land on which cocoanut trees are raised;

(*b*) the measures taken by Government for the improvement of coconut cultivation and control of diseasses affecting it?

A.—Dr. R. NAGAN GOWDA (Minister for Agriculture).—

		Acres
(*a*)	(i) Regulated Market, Arsikere.	22,854
	(ii) Regulated Market, Tiptur.	63,194

(*b*) For the development of cocoanut cultivation a cocoanut nursery scheme is under implementation under which quality seedlings are raised and distributed to the growers at a nominal value of 8 annas per seedling.

The two important diseases of cocoanut are Stem Bleeding Disease and Anabe Roga. Necessary advice for the treatment of these diseases is being afforded by the Department. Demonstrations in the technique of treatment of these diseases are also held for education of growers. The chemicals required for combating of these diseases are stocked and supplied by the Department.

ಶ್ರೀ ಕೆ. ಪಂಚಾಕ್ಷರಯ್ಯ.—ಅರಸೀಕೆರೆ ರೆಗ್ಯುಲೇಟೆಡ್ ಮಾರ್ಕೆಟ್‌ಗೆ ಯಾವಯಾವ ತಾಲ್ಲೂಕುಗಳು ಸೇರಿವೆ?

Dr. R. NAGAN GOWDA.—I have not got those details. I am unable to say that immediately.